**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಅಫಜಲಪೂರ.</u>**

**<u>ಸಿ.ಸಿ.ನಂ.430/2018</u>**

ಸರಕಾರದ ಪರವಾಗಿಃ ದೇವಲಗಾಣಗಾಪೂರ ಪೋಲಿಸ ಠಾಣೆ

-:ವಿರುದ್ದ:-

ಆರೋಪಿ/ತರುಃ ರಾಮಜಿ ನವಲೇ ತಂದೆ ವಿಠಲ,
33 ವರ್ಷ, ಉಃ ಡ್ರೈವರ್ ಕೆಲಸ,
ವಾಸಃ ಮುನ್ನಹಳ್ಳಿ ಗ್ರಾಮ,
ತಾಃ ಆಳಂದ, ಜಿಃ ಕಲಬುರಗಿ.

**<u>ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಪ್ರಕಾರ ಆರೋಪಿತನ ಹೇಳಿಕೆಗಳು</u>**

ಪ್ರಃ1: ಈ ಪ್ರಕರಣದಲ್ಲಿರುವ ಸಾಕ್ಷಿಗಳ ಸಾಕ್ಷ್ಯವನ್ನು ಕೇಳಿಸಿಕೊಂಡಿದ್ದಿರಾ ?

ಉಃ

ಪ್ರಃ2: ಪ್ರಾಸಾ-1. ಬಾಬುಸಾಬ ಪಟೇಲ್ ತಂದೆ ಖಾಜಾಸಾಬ, ಇವರು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ದಿನಾಂಕಃ 24.02.2018 ರಂದು ಸಾಯಂಕಾಲ 05-30 ಗಂಟೆ ಸಮಯದಲ್ಲಿ ಅಫಜಲಪೂರ ರಸ್ತೆಯಲ್ಲಿರುವ ದತ್ತಾ ಪೆಟ್ರೋಲ್ ಬಂಕಿನ ಹತ್ತಿರ ಅಪಘಾತವಾಗಿದ್ದು ಮರುದಿನ ಚಾಸಾ-1 ರವರು ತೋರಿಸಿದ ಘಟನಾ ಸ್ಥಳವನ್ನು ತನ್ನ ಹಾಗೂ ಚಾ-3 ಮತ್ತು ಚಾಸಾ- 4 ರವರ ಸಮಕ್ಷಮ ಪೋಲಿಸರು ಪಂಚನಾಮೆ ಮಾಡಿ ತಮ್ಮ ಸಹಿ ಪಡೆದುಕೊಂಡು ಸ್ಥಳದಿಂದ ಅಪಘಾತಕ್ಕೀಡಾದ ಬಸ್ ಮತ್ತು ಮೋಟಾರ್ ಸೈಕಲನ್ನು ಜಪ್ತಿಪಡಿಸಿಕೊಂಡಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 3 ಪ್ರಾಸಾ-01 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಸದರಿ ಅಪಘಾತದಲ್ಲಿ ಸಂಜುಕುಮಾರ ರವರು ಮೃತಪಟ್ಟಿರುತ್ತಾರೆಂದು ಹಾಗೂ ಮೃತನ ಶವ ಪಂಚನಾಮೆಯನ್ನು ತನ್ನ ಹಾಗೂ ಚಾಸಾ-3 ಮತ್ತು ಚಾಸಾ-4 ರವರ ಸಮಕ್ಷಮ ಪಂಚನಾಮೆ ಮಾಡಿ ತನ್ನ ಸಹಿ ಪಡೆದುಕೊಂಡಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 4 ಪ್ರಾಸಾ-02 ದತ್ತು ತಂದೆ ಸಿದ್ದಣ್ಣ ಅಂಬಾಡಿ, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 25.02.2018 ರಂದು ಅಫಜಲಪೂರ ರಸ್ತೆಯಲ್ಲಿರುವ ದತ್ತ ಪೆಟ್ರೋಲ ಬಂಕಿನ ಹತ್ತಿರ ಅಪಘಾತವಾಗಿದ್ದು ಮಧ್ಯಾಹ್ನ 1 ರಿಂದ

2 ಗಂಟೆ ವರೆಗೆ ಚಾಸಾ-1 ರವರು ತೋರಿಸಿದ ಘಟನಾ ಸ್ಥಳವನ್ನು ತನ್ನ ಹಾಗೂ ಚಾಸಾ-2 ರವರ ಸಮಕ್ಷಮ ಪೊಲೀಸರು ಪಂಚನಾಮೆ ಮಾಡಿ ತಮ್ಮ ಸಹಿ ಪಡೆದುಕೊಂಡು, ಸ್ಥಳದಿಂದ ಅಪಘಾತಕ್ಕೀಡಾದ ಬಸ್ ಮತ್ತು ಮೋಟಾರ್ ಸೈಕಲನ್ನು ಜಪ್ತಿಪಡಿಸಿಕೊಂಡು, ಸದರಿ ಅಪಘಾತದಲ್ಲಿ ಸಂಜುಕುಮಾರ ರವರು ಮೃತಪಟ್ಟಿರುತ್ತಾರೆಂದು ಹಾಗೂ ಮೃತನ ಶವ ಪಂಚನಾಮೆಯನ್ನು ತನ್ನ ಹಾಗೂ ಚಾಸಾ-2 ಮತ್ತು 4 ರವರ ಸಮಕ್ಷಮ ಪಂಚನಾಮೆ ಮಾಡಿ ತನ್ನ ಸಹಿ ಪಡೆದುಕೊಂಡಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 5 ಪ್ರಾಸಾ-03 ಪರಮೇಶ್ವರ ತಂದೆ ವೀರಭದ್ರಪ್ಪ ಸುಂಟನೂರ, ಇವರು ತಮ್ಮ ಸಾಕ್ಷ್ಯದಲ್ಲಿ ಆರೋಪಿತನನ್ನು ನೋಡಿರುತ್ತೇನೆ. ಚಾ-10 ತನ್ನ ಮಗ, ಚಾಸಾ-9 ತನ್ನ ಸಂಬಂಧಿ, ಮೃತ ಸಂಜುಕಮಾರ ತನ್ನ ಮಗ. ಈಗ್ಗೆ 2 ವರ್ಷಗಳ ಹಿಂದೆ ಚೌಡಾಪೂರದ ದತ್ತಾ ಪೆಟ್ರೋಲ್ ಬಂಕಿನ ಹತ್ತಿರ ಬಸ್ ಹಾಗೂ ಮೃತ ಸಂಜುಕುಮಾರ ಚಲಾಯಿಸುತ್ತಿದ್ದ ಮೋಟಾರ್ ಸೈಕಲ್ ನಡುವೆ ಅಪಘಾತವಾಗಿ ತನ್ನ ಮಗ ಆಸ್ಪತ್ರೆಗೆ ಹೋಗುವಾಗ ಮಾರ್ಗಮದ್ಯದಲ್ಲಿ ಮೃತಪಟ್ಟಿರುತ್ತಾನೆಂದು ಚಾಸಾ-4 ರವರು ತನಗೆ ತಿಳಿಸಿರುತ್ತಾರೆಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 6 ಪ್ರಾಸಾ-03 ರವರು ತಮ್ಮ ಮುಂದುವರೆದ ಸಾಕ್ಷ್ಯಲ್ಲಿ ನಂತರ ತಾನು ಆಸ್ಪತ್ರೆಗೆ ಹೋಗಿ ನೋಡಲಾಗಿ ತನ್ನ ಮಗ ಗಂಭೀರ ಗಾಯಗೊಂಡು ಮೃತಪಟ್ಟಿರುತಾತನೆಂದು ಹಾಗೂ ಆರೋಪಿತನು ಅಪಘಾತಪಡಿಸಿದ ಬಸ್ಸಿನ ಚಾಲಕನಾಗಿರುತ್ತಾನೆ. ಅಪಘಾತವು ಆರೋಪಿತನ ತಪ್ಪಿನಿಂದಾಗಿರುತ್ತದೆ. ನಂತರ ಆರೋಪಿತನ ವಿರುದ್ದ ದೂರು ದಾಖಲಿಸಿರುತ್ತೇನೆಂದು ಹಾಗೂ ಬಸ್ಸಿನ ಚಾಲಕನ ಹೆಸರನ್ನು ತಿಳಿದುಕೊಂಡು ಮರು ಹೇಳಿಕೆ ನೀಡಿರುತ್ತೇನೆಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 7 ಪ್ರಾಸಾ-04 ಶಿವಾನಂದ ತಂದೆ ತಿಪ್ಪಣ್ಣ ಪೂಜಾರಿ, ಇವರು ತಮ್ಮ ಸಾಕ್ಷ್ಯದಲ್ಲಿ ಚಾಸಾ-1 ಗೊತ್ತು, ಮೃತ ಸಂಜುಕುಮಾರ ಗೊತ್ತು. ದಿನಾಂಕಃ 24.02.2018 ರಂದು ಸಾಯಂಕಾಲ 06-00 ಗಂಟೆಗೆ ತಾನು ಚೌಡಾಪೂರದಿಂದ ತಮ್ಮೂರಿಗೆ ಹೋಗುತ್ತಿದ್ದಾಗ ಚೌಡಾಪೂರದ ದತ್ತಾ ಪೆಟ್ರೋಲ್ ಹತ್ತಿರ ಬಸ್ ಹಾಗೂ ಮೃತ ಸಂಜುಕುಮಾರ ಚಲಾಯಿಸುತ್ತಿದ್ದ ಮೋಟಾರ್ ಸೈಕಲ ನಡುವೆ ಅಪಘಾತವಾಗಿದ್ದು, ಬಸ್ಸು ಅಫಜಲಪೂರದಿಂದ ಕಲಬುರಗಿಗೆ ಹೊರಟಿತ್ತು ಆ ದಿನ ಆರೋಪಿತನು ಅತಿ ವೇಗವಾಗಿ ಚಲಾಯಿಸುತ್ತಿದ್ದನು. ಮೃತ ಸಂಜುಕುಮಾರ ಚೌಡಾಪೂರದಿಂದ ಮದರಾ ಕಡೆಗೆ ತನ್ನ ಮೋಟಾರ್ ಸೈಕಲ ಮೇಲೆ ನಿಧಾನವಾಗಿ ಹೋಗುತ್ತಿದ್ದಾಗ, ಆರೋಪಿತನು ತನ್ನ ಬಸ್ಸನ್ನು ಅತಿ ವೇಗವಾಗಿ ಚಲಾಯಿಸಿ ಅಪಘಾತಪಡಿಸಿದ್ದರಿಂದ ತಲೆ ಹಾಗೂ ಸೊಂಟಕ್ಕೆ ಭಾರಿ ರಕ್ತಗಾಯವಾಗಿ ಮಾರ್ಗ ಮದ್ಯದಲ್ಲಿ ಮೃತಪಟ್ಟಿರುತ್ತಾನೆಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರ: 8 ಪ್ರಾಸಾ-04 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ನಂತರ ತಾನು ಚಾಸಾ-1 ರವರಿಗೆ ಪೋನ್ ಮಾಡಿ ವಿಷಯ ತಿಳಿಸಿ ನಂತರ ಅಂಬುಲೆನ್ಸನಲ್ಲಿ ಆಸ್ಪತ್ರೆಗೆ ತೆಗೆದುಕೊಂಡು ಹೋಗುವಾಗ ಮಾರ್ಗ ಮದ್ಯದಲ್ಲಿ ಮೃತಪಟ್ಟ ಬಗ್ಗೆ ವಿಷಯ ತಿಳಿದಿರುತ್ತದೆ. ಅಪಘಾತವು ಆರೋಪಿತನ ತಪ್ಪಿನಿಂದ ಆಗಿರುತ್ತದೆ. ಈ ಘಟನೆ ಕುರಿತು ಹೇಳಿಕೆ ನೀಡಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉ:

ಪ್ರ: 9 ಪ್ರಾಸಾ-05 ಭೀಮಣ್ಣಗೌಡ ತಂದೆ ಬಸಣ್ಣ, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 24.02.2018 ರಂದು ಚೌಡಾಪೂರ ಕ್ರಾಸ ಬಳಿ ಇರುವ ಪೆಟ್ರೋಲ್ ಬಂಕ್ ಹತ್ತಿರವಿದ್ದಾಗ ಸಾಯಂಕಾಲ 06-00 ಗಂಟೆ ಸುಮಾರಿಗೆ ಚಾಸಾ-4 ತನಗೆ ಪೋನ್ ಮಾಡಿ ತಿಳಿಸಿದ್ದೇನೆಂದರೆ ಸ್ವಲ್ಪ ಸಮಯದ ಹಿಂದೆ ನಿಮ್ಮ ಊರಿನವರಾದ ಸಂಜಯಕುಮಾರ ತಂದೆ ಪರಮೇಶ್ವರ ರವರು ಮೋಟಾರ್ ಸೈಕಲ ನಂ.ಕೆಎ-27-ಆರ್-4978 ನೇದ್ದರ ಮೇಲೆ ಚೌವಡಾಪೂರದಿಂದ ದಣ್ಣೂರ ಕಡೆಗೆ ಹೋಗುತ್ತಿದ್ದಾಗ ಎದುರುಗಡೆಯಿಂದ ಬಸ್ ಬಂದು ಮೋಟಾರ್ ಸೈಕಲಗೆ ಡಿಕ್ಕಿಪಡಿಸಿದ್ದು, ಸಂಜಯಕುಮಾರ ರವರ ತಲೆಯ ಎಡಭಾಗ ಹಾಗೂ ಮುಖಕ್ಕೆ ರಕ್ತಗಾಯವಾಗಿತ್ತು. ನಾವೆಲ್ಲರೂ ಬಂದು ಅಪಘಾತಕ್ಕಿಡಾದ ಸಂಜಯಕುಮಾರ ರವರನ್ನು ಚಿಕಿತ್ಸೆಗೆಂದು ಕರೆದುಕೊಂಡು ಹೋಗುತ್ತಿದ್ದಾಗ ಸಾಯಂಕಾಲ 07-00 ಗಂಟೆಗೆ ಸಿರಸಗಿ ಗ್ರಾಮದ ಹತ್ತಿರ ಮರಣ ಹೊಂದಿರುತ್ತಾನೆಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉ:

ಪ್ರ: 10 ಪ್ರಾಸಾ-05 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ನಂತರ ಗೊಬ್ಬರ ಸರಕಾರಿ ಆಸ್ಪತ್ರೆಗೆ ಶವವನ್ನು ತಂದು ಹಾಕಿರುತ್ತೇವೆ. ನಂತರ ಗಾಣಗಾಪೂರ ಪೋಲಿಸ್ ಠಾಣೆಗೆ ಹೋಗಿ ದೂರು ನೀಡಿರುತ್ತಾರೆ. ಸದರಿ ಬಸ್ ವೇಗವಾಗಿ ಬಂದು ಅಪಘಾಪಡಿಸಿದ್ದು ಅದರ ಚಾಲಕನ ತಪ್ಪಿ ನಿಂದ ಅಪಘಾತ ಸಂಭವಿಸಿದ್ದು ಪೋಲಿಸರಿಗೆ ಘಟನೆ ಕುರಿತು ಹೇಳಿಕೆ ನೀಡಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉ:

ಪ್ರ: 11 ಪ್ರಾಸಾ-06 ಕಾವೇರಿ ಗಂಡ ಸಂಜೀವಕುಮಾರ, ಇವರು ತಮ್ಮ ಸಾಕ್ಷ್ಯದಲ್ಲಿ ಈಗ್ಗೆ 2018ನೇ ಇಸ್ವಿಯಲ್ಲಿ ಒಂದು ದಿನ ತನ್ನ ಗಂಡ ಬೈಕ ಮೇಲೆ ಚೌವಡಾಪೂರ ಗ್ರಾಮಕ್ಕೆ ಸಾಯಂಕಾಲ ಹೋಗುತ್ತಿದ್ದಾಗ ರಸ್ತೆ ಅಪಘಾತವಾಗಿ ಮೃತಪಟ್ಟಿರುತ್ತಾರೆಂದು ಹಾಗೂ ಸದರಿ ವಿಷಯವನ್ನು ತನಗೆ ಚಾಸಾ-5 ಮತ್ತು 6 ರವರು ಪೋನ್ ಮೂಲಕ ಚೌವಡಾಪೂರದ ದತ್ತಾ ಪೆಟ್ರೋಲ ಬಂಕ್ ಹತ್ತಿರ ಅಪಘಾತವಾಗಿರುವುದಾಗಿ ತಿಳಿಸಿರುತ್ತಾರೆಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉ:

ಪ್ರ: 12 ಪ್ರಾಸಾ-06 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ತಾವು ಸ್ಥಳಕ್ಕೆ ಹೋದಾಗ ತನ್ನ ಗಂಡನ ತಲೆಗೆ, ಕೈ ಕಾಲಿಗೆ ಮತ್ತು ಮುಖಕ್ಕೆ ಪೆಟ್ಟಾಗಿತ್ತು, ಘಟನಾ ಸ್ಥ.,ಳದಿಂದ ಕಲಬುರಗಿಯ ಖಾಸಗಿ ಆಸ್ಪತ್ರೆಗೆ

ತೆಗೆದುಕೊಂಡು ಹೋಗುತ್ತಿರುವಾಗ ಮಾರ್ಗ ಮಧ್ಯದಲ್ಲಿ ಮೃತಪಟ್ಟಿರುತ್ತಾನೆಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 13 ಪ್ರಾಸಾ-06 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ನಂತರ ಗೊಬ್ಬರ ಸರಕಾರಿ ಆಸ್ಪತ್ರೆಗೆ ತೆಗೆದುಕೊಂಡು ಹೋಗಿದ್ದು, ತಾವು ಜನರಿಗೆ ವಿಚಾರಿಸಿದಾಗ ಬಸ್ಸಿನ ಚಾಲಕನ ತಪ್ಪಿನಿಂದ ಈ ಅಪಘಾತವಾಗಿದೆ ಎಂದು ತಿಳಿಸಿದರು. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಸಾಕ್ಷಿಯು ಗುರುತಿಸಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 14 ಪ್ರಾಸಾ-07 ಅರುಣಕುಮಾರ ತಂದೆ ಪರಮೇಶ್ವರ, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 24.02.2018 ರಂದು ತಾನು ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದಾಗ ತನಗೆ ಫೋನ ಕರೆ ಬಂದು ನಿಮ್ಮ ತಮ್ಮ ರಸ್ತೆಯ ಅಪಘಾತವಾಗಿ ಮರಣ ಹೊಂದಿದ್ದಾರೆ ಅದಕ್ಕಾಗಿ ನೀವು ಬರಬೇಕು ಅಂತಾ ತಿಳಿಸಿದರು, ಮರುದಿನ ದಿನಾಂಕಃ 25.02.2018 ರಂದು ತಾನು ಊರಿಗೆ ಬಂದಾಗ ತನ್ನ ತಮ್ಮ ಮೃತ ಹೊಂದಿ ಗೊಬ್ಬರ ಸರಕಾರಿ ಆಸ್ಪತ್ರೆಯದಲ್ಲಿ ದಾಖಲಾಗಿರುವುದು ಗೊತ್ತಾಯಿತು. ತಲೆಗೆ ಭಾರಿ ಗಾಯವಾಗಿತ್ತು, ಮುಖ ಎಲ್ಲಾ ಚಚ್ಚಿ ಹೋಗಿತ್ತು, ಕೈ-ಕಾಲುಗಳಿಗೆ ಪೆಟ್ಟಾಗಿತ್ತು ಎಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 15 ಪ್ರಾಸಾ-07 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಚಾಸಾ-5 ರಿಂದ 7 ರವರು ಬಸ್ಸಿ ನ ತಪ್ಪಿ ನಿಂದ ಚೌವಡಾಪೂರದ ದತ್ತಾ ಪೆಟ್ರೋಲ್ ಬಂಕ್ ಹತ್ತಿರ ಅಪಘಾತವಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಆಗ ತಾನು ವಿಚಾರಿಸಿದಾಗ ಬಸ್ಸಿನ ಚಾಲಕನ ಹೆಸರು ರಾಮಜಿ ಎಂದು ತಿಳಿಯಿತು. ಸದರಿ ವಿಷಯದ ಕುರಿತು ತಾನು ಪೋಲಿಸರ ಮುಂದೆ ಹೇಳಿಕೆ ನೀಡಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 16 ಪ್ರಾಸಾ-08 ಕೃಷ್ಣಕುಮಾರ ತಂದೆ ಅಂಬೋಜಿರಾವ ಸಿಪಿ.ಐ, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 24.02.2018 ರಂದು ರಾತ್ರಿ 09-30 ಗಂಟೆಗೆ ತಾನು ಠಾಣೆಯಲ್ಲಿದ್ದಾಗ, ಚಾಸಾ-1 ರವರು ಹೇಳಿಕೆ ದೂರು ನೀಡಿದ್ದು, ಅದರ ಸಾರಾಂಶ ಆಧರಿಸಿ ಠಾಣಾ ಗುನ್ನೆ ನಂ.22/2018ನ್ನು ದಾಖಲಿಸಿಕೊಂಡು ದಿನಾಂಕಃ 25.02.2018 ರಂದು ಸರಕಾರಿ ಆಸ್ಪತ್ರೆ ಗೊಬ್ಬರನಲ್ಲಿ ಚಾಸಾ-1 ರವರ ಮರು ಹೇಳಿಕೆಯನ್ನು ಪಡೆದುಕೊಂಡು, ಅದೇ ದಿನ ಬೆಳಗ್ಗೆ 10-00 ರಿಂದ 11-00 ಗಂಟೆವರೆಗೆ ಚಾಸಾ-2 ಮತ್ತು 3 ರವರ ಸಮಕ್ಷಮ ಶವ ಪಂಚನಾಮೆಯನ್ನು ಮಾಡಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 17 ಪ್ರಾಸಾ-08 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಅದೇ ದಿನ ಮಧ್ಯಾಹ್ನ 02-00 ರಿಂದ 03-00 ಗಂಟೆ ವರೆಗೆ ಗುನ್ನೆ ಪಂಚನಾಮೆ ಮಾಡಿ ಬಸ್ ಮತ್ತು ದ್ವಿಚಕ್ರ ವಾಹನವನ್ನು ಜಪ್ತಿಪಡಿಸಿಕೊಂಡು, ಅದೇ ದಿನ ಚಾಸಾ-4 ರಿಂದ 10 ರವರ ಹೇಳಿಕೆ ಮತ್ತು ಸಾಕ್ಷಿ ಬಾಂಡಗಳನ್ನು ಪಡೆದುಕೊಂಡು, ದಿನಾಂಕಃ 26.06.2018 ರಂದು ಮುಂದಿನ ತನಿಖೆಗಾಗಿ ಚಾಸಾ-18 ರವರಿಗೆ ಕಡತಗಳನ್ನು ವಹಿಸಿಕೊಟ್ಟಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 18 ಪ್ರಾಸಾ-09 ರವೀಂದ್ರ ತಂದೆ ಕಾಮಣ್ಣ ನಾಯಕೋಡಿ, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 13.03.2018 ರಂದು ಚಾಸಾ-18 ರವರಿಂದ ಈ ಪ್ರಕರಣದ ಮುಂದಿನ ತನಿಖೆಗಾಗಿ ಕಡತಗಳನ್ನು ತೆಗೆದುಕೊಂಡು, ದಿನಾಂಕಃ 09.04.2018 ರಂದು ಮೃತನ ಪಿ.ಎಂ. ವರದಿಯನ್ನು ಚಾಸಾ-15 ರವರಿಂದ ಪಡೆದುಕೊಂಡು, ಚಾಸಾ-18 ರವರು ನೀಡಿದ ಕಡತಗಳನ್ನು ಪರಿಶೀಲನೆ ಮಾಡಿ ನೋಡಿದಾಗ ಸಾಕಷ್ಟು ಸಾಕ್ಷಿ ಪುರಾವೆಗಳು ದೋರೆತಿದ್ದರಿಂದ ತನಿಖೆಯನ್ನು ಪೂರ್ಣಗೊಳಿಸಿ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರಃ 19 ಪ್ರಾಸಾ-10 ಜಾಕೀರ ತಂದೆ ಹುಸೇನಸಾಬ ಇನಾಂದಾರ, Dy.S.P. ಲೋಕಾಯುಕ್ತ, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 01.03.2018 ರಂದು ಚಾಸಾ-17 ರವರಿಂದ ಈ ಪ್ರಕರಣದ ಕಡತಗಳಣನ್ನು ಪಡೆದುಕೊಂಡು ಮುಂದಿನ ತನಿಖೇ ಕೈಗೊಂಡು ಸಿ, ಸದರಿ ದಿನದಂದು ಈ ಪ್ರಕರಣದ ಆರೋಪಿ ಕಛೇರಿಗೆ ಹಾಜರಾಗಿದ್ದು ಆತನನ್ನು ವಿಚಾರಿಸಿ ದಸ್ತಗಿಗಿರಿ ನಿಯಮ ಪಾಲನೆ ಮಾಡಿ ಯೋಗ್ಯ ಜಾಮೀನು ಪಡೆದು ಬಿಡುಗಡೆಗೊಳಿಸಿರುತ್ತೇನೆಂದು ಹಾಗೂ ಅದೇ ದಿನ ಆರೋಪಿಯ ಕರ್ತವ್ಯ ಹಾಜರಾತಿ ದಾಖಲೆಯನ್ನು ಪಡೆದುಕೊಂಡು ಮತ್ತು ಅಪಘಾತಕ್ಕೆ ಒಳಗಾದ ಬಸ್ಸಿನ ದಾಖಲಾತಿಗಳನ್ನು ಸಹ ಪಡೆದುಕೊಂಡು ಅದೇ ದಿನ ಚಾಸಾ-12 ರವರಿಗೆ ಚಾಸಾ-12 ರವರಿಂದ ಬಸ್ಸಿನ ದಾಖಲಾತಿಗಳನ್ನು ಪಡೆದು ಬಸ್ ಬಿಡುಗಡೆ ಮಾಡಿರುತ್ತೇನೆಂದು ಹಾಗೂ ಚಾಸಾ-11 ಮತ್ತು 12 ರವರ ಹೇಳಿಕೆಯನ್ನು ಪಡೆದುಕೊಂಡು, ದಿನಾಂಕಃ 12.04.2018 ರಂದು MVA ವರದಿ ಪಡೆದಿದ್ದು ತದನಂತರ ಮುಂದಿನ ತನಿಖೆಗಾಗಿ ಚಾಸಾ-19 ರವರಿಗೆ ಕಡತಗಳನ್ನು ವರ್ಗಾಯಿಸಿರುವುದಾಗಿ ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ

ಪ್ರ-20 ಈ ಕೇಸಿನ ಬಗ್ಗೆ ನಿಮಗೆ ಏನಾದರೂ ಹೇಳುವುದು ಇದೆಯೇ?

ಉಃ

ಪ್ರ-21 ಈ ಕೇಸಿನ ಬಗ್ಗೆ ನಿಮ್ಮ ಪರವಾಗಿ ಸಾಕ್ಷಿ ಮಾಡಿಸಲು ಇಚ್ಚಿಸುವಿರಾ?

ಉಃ

(ಆರೋಪಿತನ/ರ ಹೇಳಿಕೆಯನ್ನು ಆರೋಪಿತರಿಗೆ/ನಿಗೆ ತಿಳಿಯುವ ಭಾಷೆಯಲ್ಲಿ ಹೇಳಿ ಅವರಿಂದ/ನಿಂದ ಬಂದ ಉತ್ತರವನ್ನು ದಾಖಲಿಸಿಕೊಳ್ಳಲಾಯಿತು)

ದಿನಾಂಕಃ 06.08.2025

ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ.ಅಫಜಲಪೂರ.